ಪ್ರಧಾನ ಸಿವಿಲ್ ಜೆಡ್ಜ್ ವತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

ಸಿಸಿ - 2/2015

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಬಸವರಾಜು | ಸಿಡಬ್ಲ್ಯೂ 8 |
| ತಂದೆಯ ಹೆಸರು | - | ಲೇಟ್ ಲಿಂಗಾಚಾರ್ | ಪಿಡಬ್ಲ್ಯೂ 5 |
| ವಯಸ್ಸು | - | 61 ವರ್ಷ | |
| ಕೆಲಸ | - | ನಿವೃತ್ತ ಎಎಸ್ ಐ | ಸಾ.ಪ್ರ.ಬೋ |
| ವಾಸ | - | ಟಿ ನರಸೀಪುರ | ದಿ. 23.07.2018 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) 2011 ರಿಂದ 2015 ರವರೆಗೆ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆ ಮತ್ತು ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 20-10-2014 ಬೆಳಿಗ್ಗೆ 12.20 ಗಂಟೆಗೆ ಅಂಕನಹಳ್ಳಿ ಗ್ರಾಮದ ಚಾಸಾ 1 ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಮೇರೆಗೆ ಠಾಣಾ ಮೊಕದ್ದಮೆ ನಂ. 208/2014, ಕಲಂ 143, 448, 323, 504, 506 ಸಹವಾಚಕ ಕಲಂ 149 ರ ಐಪಿಸಿ ರ ಅಡಿಯಲ್ಲಿ ಪ್ರಕರಣ ನೋಂದಾಯಿತ ಎಫ್ ಐ ಆರ್ ನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದೂರಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ1 ಬಿ ಎಂದು ಗುರ್ತಿಸಲಾಯಿತು. ಎಫ್ ಐ ಆರ್ ನಿಪಿ 3 ಎಂದು ಗುರ್ತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ 3 ಎ ಎಂದು ಗುರ್ತಿಸಲಾಯಿತು.

2) ದಿನಾಂಕಃ 21-10-2014 ರಂದು ಕೃತ್ಯ ಸ್ಥಳಕ್ಕೆ ಬೇಟಿ ನೀಡಿ ಚಾಸಾ 1 ರವರು ಕೃತ್ಯ ಸ್ಥಳ ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪಂಚರಾದ ಚಾಸಾ 5 ಮತ್ತು 6 ರವರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇನೆ. ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರ್ತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ2 ಬಿ ಎಂದು ಗುರ್ತಿಸಲಾಯಿತು. ಈ ಕೇಸಿನ ಸಾಕ್ಷಿದಾರರಾದ ಚಾಸಾ 2 ರಿಂದ 4 ರವರ ಹೇಳಿಕೆ ಮತ್ತು ಚಾಸಾ 1 ರವರ ಮರು ಹೇಳಿಕೆ ಪಡೆದಿರುತ್ತೇನೆ. ನಂತರ ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ 9 ರವರ ವರ್ಗಾವಣೆ ಮಾಡಿರುತ್ತೇನೆ.

ಪಾಟೀ ಸವಾಲು ಆರೋಪಿ ಪರ ಎಸ್ ಎಸ್ ಆರ್ ವಕೀಲರಿಂದ -

3) ಸತ್ಯಾಸತ್ಯತೆ ಪರಿಶೀಲನೆ ಮಾಡದೆ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಪ್ರಕರಣ ನೋಂದಾಯಿಸಿರುತ್ತೇನೆ ಎಂದರೆ ಸರಿಯಲ್ಲ. ಅಂಕಿ ಅಂಶಗಳಿಗೋಸ್ಕರ ಸುಳ್ಳು ಎಫ್ ಐ ಆರ್ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ